ಶ್ರೀ ಜಯಚಂದ್ರ (ಕಾನೂನು ಮತ್ತು ಸಂಸದೀಯ,ಪಶು ಸಂಗೋಪನೆ, ಮಾನವ ಹಕ್ಕುಗಳ ಸಚಿವರು): ಮಾನ್ಯ ಕೃಷ್ಣಾರೆಡ್ಡಿಯವರ ಪಶ್ನೆಗೆ ಕಂದಾಯ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

2, **ವಿಷಯ : ಸರ್ಕಾರದ ವತಿಯಿಂದ ಮೆಕ್ಕೆ ಜೋಳ ಖರೀದಿ ಮಾಡುವ ಬಗ್ಗೆ**

ಶ್ರೀ ಎನ್.ಹೆಚ್.ಕೋನರೆಡ್ಡಿ(ನವಲಗುಂದ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಈಗಾಗಲೇ ಮೆಕ್ಕೆಜೋಳ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದಾರೆ.25 ಕ್ವಿಂಟಾಲ್ ಖರೀದಿ ಮಿತಿ ಇದ್ದಿದ್ದನ್ನು ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಬದಲಾವಣೆ ಮಾಡಿ ರೈತರು ಬೆಳೆದಂಥ ಮೆಕ್ಕೆಜೋಳ ಬೆಳೆಯನ್ನು ಪೂರ್ತಿ ಖರೀದಿ ಮಾಡಬೇಕೆಂದು ನಿರ್ಧಾರ ಮಾಡಲಾಯಿತು ಮತ್ತು ಅದನ್ನು 75 ಕ್ವಿಂಟಾಲ್ ಮಿತಿ ಎಂದು ಮಾಡಿದರು. ಹಾಗಾಗಿ ಬೆಳೆಯನ್ನು ಸಂಪೂರ್ಣ ವಾಗಿ ಖರೀದಿ ಮಾಡಬೇಕೆಂದು ಒಂದು ನಿರ್ಣಯವಾಗಿತ್ತು. ಖರೀದಿ ಕೇಂದ್ರಗಳನ್ನು ತೆರೆಯುವುದಕ್ಕೆ ಅಧಿಕಾರಿಗಳೇ ಇಲ್ಲವೆಂದು ಹೇಳುತ್ತಾರೆ, ಖರೀದಿ ಮಾಡಿದಂಥ Transport Contractor ಗೆ ಮೊದಲು 80% ಕೊಡುತ್ತಿದ್ದರು. ಈಗ 40% ಕೊಡುತ್ತಿರುವುದಕ್ಕೆ ಅವರು transport ಅನ್ನು ಬೇಗ ಬೇಗ ಮಾಡುತ್ತಿಲ್ಲ. ಈ ಎಲ್ಲ ಸಮಸ್ಯೆಗಳಿಗೆ ತಕ್ಷಣ ಪರಿಹಾರವನ್ನು ಕೊಡುವ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಬೇಕು.

ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ,ಪಶು ಸಂಗೋಪನಾ, ಮಾನವ ಹಕ್ಕುಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಸರ್ಕಾರ ತೀರ್ಮಾನ ಮಾಡಿದೆ. 75 ಅಥವಾ 100 ಕ್ವಿಂಟಾಲ್ ಎಂದು ಮಿತಿ ಏನಿತ್ತು ಅದನ್ನು relax ಮಾಡಿ ನೇರವಾಗಿ ರೈತರಿಂದ ಬರತಕ್ಕಂಥದ್ದನ್ನು ಕೊಂಡುಕೊಳ್ಳಬೇಕೆಂದು ಸ್ಪಷ್ಟ ಸೂಚನೆ ಕೊಟ್ಟಿದ್ದೇವೆ ಮತ್ತು ನೇರವಾಗಿ ರೈತರಿಂದ ಕೊಳ್ಳಬೇಕಾದಂಥ ಸಂದರ್ಭದಲ್ಲಿ ಅಗತ್ಯ ಬಿದ್ದರೆ ಕೇಂದ್ರಗಳನ್ನು ಕೂಡ ವರ್ಗಾವಣೆ ಮಾಡಿ ಹಳ್ಳಿ ಪ್ರದೇಶಗಳಿಂದ procurement ಮಾಡಬೇಕು

ಎನ್ನತಕ್ಕಂಥ ಮಾತನ್ನು ಹೇಳಿದ್ದೇವೆ. ಪೇಮೆಂಟ್ ಬಗ್ಗೆ ಹೇಳಿದ್ದೀರಿ, ಅದರ ಬಗ್ಗೆಯೂ ಗಮನ ಹರಿಸುತ್ತೇವೆ.

3, ವಿಷಯ : ಕಾರವಾರ ಸೀ ಬರ್ಡ್ ನೌಕಾನೆಲೆ ಯೋಜನೆಗೆ ಭೂಸ್ವಾಧೀನ ಪಡಿಸಿದ್ದು, ಪರಿಹಾರ ನೀಡದಿರುವ ಬಗ್ಗೆ.

ಶ್ರೀ ಸತೀಶ್ ಸೈಲ್ ಕೃಷ್ಣ (ಕಾರವಾರ): ಅಧ್ಯಕ್ಷರೆ, ಕಾರವಾರದಲ್ಲಿ ಏಷ್ಯಾದಲ್ಲೇ ಅತಿ ದೊಡ್ಡದಾದಂಥ ಸೀ ಬರ್ಡ್ ನೌಕಾನೆಲೆಗೆ 1986ರಲ್ಲೇ ಜಮೀನನ್ನು ವಶಪಡಿಸಿಕೊಳ್ಳಲು ತಯಾರು ಮಾಡಲಾಗಿತ್ತು. ಕರ್ನಾಟಕ ಸರ್ಕಾರ ಈ ಯೋಜನೆಗಾಗಿ ಕಾರವಾರ ಹಾಗೂ ಅಂಕೋಲ ತಾಲ್ಲೂಕುಗಳ 13 ಹಳ್ಳಿಗಳಿಂದ 5,000 ಹೆಕ್ಟೇರ್ ಜಮೀನನ್ನು ಭೂಸ್ವಾಧೀನಪಡಿಸಿ 432 ರೈತಾಪಿ ಮತ್ತು ಮೀನುಗಾರರ ಕುಟುಂಬಗಳನ್ನು ಸಂತ್ರಸ್ತರನ್ನಾಗಿ ಮಾಡಿತು. ಆದರೆ , ಆ ಜಮೀನಿಗೆ ಏನು ರೇಟ್ ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ. 1986 ರಲ್ಲಿ ಈ ಯೋಜನೆಯ ಉದ್ಘಾಟನೆಗೆ ಬಂದಿದ್ದ ಪ್ರಧಾನಿ ದಿವಂಗತ ರಾಜೀವ್‌ಗಾಂಧಿಯವರು ದೇಶಕ್ಕಾಗಿ ತ್ಯಾಗ ಮಾಡಿದ.....

ಅಧ್ಯಕ್ಷರು: ಅದನ್ನಲ್ಲಾ ಹೇಳಬೇಡಿ. ಈಗ ಸ್ವಾಧೀನಪಡಿಸಿಕೊಂಡಿದ್ದಾರೆ. ಅದಕ್ಕೆ ಪರಿಹಾರ ನೀಡಿಲ್ಲವೆಂದು ಕೇಳಿದ್ದೀರಿ. ಅಷ್ಟೇ ಕೇಳಿ.

ಶ್ರೀ ಸತೀಶ್ ಸೈಲ್ ಕೃಷ್ಣ : ಅಧ್ಯಕ್ಷರೆ, 450/– ರೂ.ಗಳ ಪರಿಹಾರ ಎಂದು ಆಗಿದೆ. ನಂತರ 11,500/– ರೂ.ಗಳ ಪರಿಹಾರ ಆಗಬೇಕೆಂದು ಉಚ್ಚ ನ್ಯಾಯಾಲಯದಿಂದ ಹಾಗೂ ಸರ್ವೋಚ್ಚ ನ್ಯಾಯಾಲಯದಿಂದ ಆದೇಶ ಹೊರಡಿಸಲಾಗಿತ್ತು. 30 ವರ್ಷವಾದರೂ ಆ ಹಣವನ್ನು ಕೊಟ್ಟಿಲ್ಲ.

ಅಧ್ಯಕ್ಷರು : ಪರಿಹಾರ ನೀಡುವ ವಿಚಾರದ ಬಗ್ಗೆ ಹೇಳಿ,